ಜಿಲ್ಲಾ ಕೇಂದ್ರದಲ್ಲಿ ಹೈಕೋರ್ಟ್ ಬೆಂಚ್ ಸ್ಥಾಪನೆ.

(1253) ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ):- ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ರಾಜ್ಯದ ಹೈಕೋರ್ಟಿನ ಕಾರ್ಯಗಳನ್ನು ವಿಕೇಂದ್ರೀಕರಣಗೊಳಿಸಿ ಜಿಲ್ಲಾ ಕೇಂದ್ರಗಳಲ್ಲಿ ಹೈಕೋರ್ಟ್ ಬೆಂಚಿನ ಪ್ರಸ್ತಾವ ಸರಕಾರ ಇಟ್ಟುಕೊಂಡಿದೆಯೇ ;

ಆ) ಬೆಂಗಳೂರು ಬಿಟ್ಟು ಬೇರೆ ಯಾವ ಜಿಲ್ಲಾ ಕೇಂದ್ರದಲ್ಲಿ ಹೈಕೋರ್ಟ್ ಬೆಂಚ್ ಸ್ಥಾಪನೆಗೆ ರಾಜ್ಯ ಸುಪ್ರೀಂ ಕೋರ್ಟಿನ ಅನುಮತಿ ಕೋರಿದೆ ;

ಇ) ಮಂಗಳೂರಿನಲ್ಲಿ ಹೈಕೋರ್ಟ್ ಬೆಂಚ್ ತೆರೆಯಲಾಗುವುದೇ ?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಆ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಇ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಉಪಾಧ್ಯಕ್ಷಿಣಿಯವರು:- ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಭಾರಿ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಮಂತ್ರಿಗಳ ಪರವಾಗಿ ಅವರ ಹೆಸರಿನ ಮುಂದೆ ಇರತಕ್ಕಂಥ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

"1956 ಕಂಪನಿಗಳ ಅಧಿನಿಯಮದ 619 (ಎ) ಕಲಮಿನ ಮೇರೆಗೆ ಭದ್ರಾವತಿ, ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕು ನಿಯಮಿತದ 1990-91ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ"

ಉಪಾಧ್ಯಕ್ಷಿಣಿಯವರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಶಿವಾನಂದ ಹೆಚ್.ಕೌಜಲಗಿ :-ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಕೆಳಕಂಡ ಅರ್ಜಿಗಳನ್ನು ಅರ್ಜಿಗಳ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅ) ಬೈಲಹೊಂಗಲ ತಾಲ್ಲೂಕಿನ ದೇವಲಾಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲಾ ಕಟ್ಟಡವನ್ನು ಆರ್ಕಿಟೆಕ್ಟ್

ಪ್ಲಾನ್ ಪ್ರಕಾರ ಪೂರ್ಣ ಮಾಡುವ ಬಗ್ಗೆ.

ಆ) ಸವದತ್ತಿ ತಾಲ್ಲೂಕಿನಲ್ಲಿರುವ ಚಿಕ್ಕೊಪ್ಪ ಹಿರಕೊಪ್ಪ ಗ್ರಾಮಗಳ ಸಂಯೋಜಿತ ಕೊಳವೆ ನೀರು ಸರಬರಾಜು ಯೋಜನೆ ತೆಗೆದುಕೊಳ್ಳುವ ಬಗ್ಗೆ.

ಇ) ರುದ್ರಾಪುರ ಕಾರೀಮನಿ ಮತ್ತು ದುಂಡನಕೊಪ್ಪ ಗ್ರಾಮಗಳ ಸಂಯೋಜಿತ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳುವ ಬಗ್ಗೆ.

ಈ) ನೇಸರಗಿ ಗ್ರಾಮದ ಶಾಲಾ ಕಟ್ಟಡವನ್ನು ಆರ್ಕಿಟೆಕ್ಟ್ ಪ್ಲಾನ್ ಪ್ರಕಾರ ಕಟ್ಟುವ ಬಗ್ಗೆ.

ಶ್ರೀ ಅಜಯಕುಮಾರ್ ಸರನಾಯಕ್ :- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಗಳನ್ನು ಅರ್ಜಿಗಳ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅ) ದಾವಣಗೆರೆ ತಾಲ್ಲೂಕು, ಮಾಯಕೊಂಡ ಗ್ರಾಮದಲ್ಲಿ ಕಿರಿಯ ಕಾಲೇಜು ಕಟ್ಟಡ ಕಟ್ಟುವ ಬಗ್ಗೆ.

ಆ) ದಾವಣಗೆರೆ ತಾಲ್ಲೂಕು, ಆನುಗೋಡು ಸಂರಕ್ಷಿತ ಅರಣ್ಯ ಪ್ರದೇಶಗಲ್ಲಿ ಪ್ರಾಣಿ ಸಂಗ್ರಹಾಲಯ ತೆರೆಯುವ ಬಗ್ಗೆ.

ಇ) ದಾವಣಗೆರೆ ತಾಲ್ಲೂಕಿನ ಹಡದಿ ರಸ್ತೆಯನ್ನು ಹಾಗೂ ಬಾಡಾ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ.

ಈ) ದಾವಣಗೆರೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿನ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗದಿರುವ ಬಗ್ಗೆ ಅರ್ಜಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು :- ಅರ್ಜಿಗಳನ್ನು ಸ್ವೀಕರಿಸಲಾಯಿತು.

ವರದಿಯನ್ನು ಒಪ್ಪಿಸುವುದು.

ಶ್ರೀ ಕೆ.ಕುಶಾಲ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಕರ್ನಾಟಕ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ 1991-92ನೇ ಸಾಲಿನ 9ನೇ ವಿಧಾನ ಸಭೆಯ 2ನೇ ವರದಿಯ ರಾಜ್ಯ ಸರ್ಕಾರಿ ವಲಯದ ಉದ್ಯಮಗಳು, ನಿಗಮ , ಮಂಡಲಿ ಮತ್ತಿತರ ಸ್ವಾಯುತ್ತ ಸಂಸ್ಥೆಗಳ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಉದ್ಯೋಗ ಹಾಗೂ ಸೇವಾ ನೇಮಕಾತಿ ಮೀಸಲಾತಿ ಕುರಿತು 8ನೇ ವಿಧಾನಸಭೆಯ 2ನೇ ವರದಿಯಲ್ಲಿನ ಶಿಫಾರಸುಗಳ ಸಂಬಂಧದಲ್ಲಿ ಸರ್ಕಾರ ತೆಗೆದುಕೊಂಡು ಕಾರ್ಯಕ್ರಮದ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಿಣಿಯವರು :- ವರದಿಯನ್ನೊಪ್ಪಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷಿಣಿಯವರೇ , ಈ ಸಭೆಯು ಇವತ್ತು ಮುಗಿಯುತ್ತದೆನ್ನತಕ್ಕಂಥ ಸೂಚನೆ ನಾನು ನಂಬಿಕೊಂಡಿಲ್ಲ. ಇದು ಒಂದು ಸೂಚನೆ, ಆದರೆ ಹಿಂದೆ ಬಿ.ಎ.ಸಿ.ಕಮಿಟಿಯಲ್ಲಿ ಸಭೆ ಸೇರಿದಾಗ ಸುಮಾರು 9-10ನೇ ತಾರೀಖಿನವರೆಗೆ ಸಭೆಯನ್ನು ನಡೆಸಬೇಕೆಂದು ಮೊದಲಿನ ಸಭೆಯಲ್ಲಿ ತೀರ್ಮಾನವಾಗಿತ್ತು. ಈ ಸಂದರ್ಭದಲ್ಲಿ ಕಾವೇರಿ ಬಗ್ಗೆ ಒಂದು ಸುದೀರ್ಘವಾದಂಥ ಚರ್ಚೆ ಈ ಸದನದಲ್ಲಿ ನಡೆಯಬೇಕೆನ್ನತಕ್ಕಂಥದ್ದನ್ನು ಸರ್ಕಾರ ಒಪ್ಪಿತ್ತು, ನಾವು ಒಪ್ಪಿದ್ದೆವು. ಇವತ್ತು ಸದನ ಏನಾದರೂ ಮುಂದೆ ಹೋಗುವುದಾದರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ದಯವಿಟ್ಟು ಕಾವೇರಿಯ ವಿವಾದದ ಬಗ್ಗೆ ಒಂದು ಸಮಗ್ರವಾದ ಚರ್ಚೆಯಾಗಬೇಕು.

ಉಪಾಧ್ಯಕ್ಷಿಣಿಯವರು :- ಬಿ.ಎ.ಸಿ. ಮೀಟಿಂಗನ್ನು ಎರಡೂವರೆ ಗಂಟೆಗೆ ಇಟ್ಟುಕೊಳ್ಳಲಾಗುತ್ತದೆ. ಅದರ ನೋಟೀಸ್ ಈಗಾಗಲೇ ನಿಮಗೆ ಬರುತ್ತಿದೆ. ಅದರ ವಿಷಯ ಈಗ ಬೇಡ, ನಿಮಗೆಲ್ಲ ನೋಟೀಸ್ ಬರುತ್ತಿದೆ.